ನೂತನ ಪ್ರಾದೇಶಿಕ ಸಾರಿಗೆ ಕಛೇರಿಗಳು

511(776); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ಬೆಂಗಳೂರಿನ ಬನಶಂಕರಿ, ಚಾಮರಾಜಪೇಟೆ, ಆರ್.ಟಿ.ನಗರ, ಮಾರತ್‌ಹಳ್ಳಿಗಳಲ್ಲಿ ಹೆಚ್ಚುವರಿ ಪ್ರಾದೇಶಿಕ ಸಾರಿಗೆ ಕಛೇರಿಗಳು, ಹುಬ್ಬಳ್ಳಿ, ಸುರತ್ಕಲ್‌ಗಳಲ್ಲಿ, ಪ್ರಾದೇಶಿಕ ಸಾರಿಗೆ ಕಛೇರಿಗಳು, ದಾಂಡೇಲಿ, ಮಧುಗಿರಿ, ತರೀಕೇರಿಗಳಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಯಾವ ಹಂತದಲ್ಲಿದೆ. ಇದುವರೆಗೆ ಎಷ್ಟು ಕಡೆ ಈ ಕಛೇರಿಗಳನ್ನು ಆರಂಭಿಸಲಾಗಿದೆ;

ಆ) ಮಂಗಳೂರು, ಬೆಳಗಾವಿ ಮತ್ತು ಹೊಸಪೇಟೆಗಳಲ್ಲಿ ಸ್ವಯಂಚಾಲಿತ ಪರೀಕ್ಷಾ ಟ್ರಾಕ್‌ಗಳನ್ನು ನಿರ್ಮಿಸಲಾಗಿದೆಯೇ; ಮಂಗಳೂರು ಹಾಗೂ ಗುಲ್ಬರ್ಗಾಗಳಲ್ಲಿ ಭಾರಿ ವಾಹನ ಚಾಲಕರ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆಯೇ; ಇಲ್ಲಿ ತರಬೇತಿ ನೀಡುವ ಕಾರ್ಯ ಆರಂಭವಾಗಿದೆಯೇ;

ಇ) ಮೇಲ್ಕಂಡ ಉದ್ದೇಶಗಳಿಗಾಗಿ ಇದುವರೆಗೆ ಆಯವ್ಯಯದಲ್ಲಿ ಒದಗಿಸಿರುವ ಖರ್ಚಾದ ಅನುದಾನ, ಕಾರ್ಯಪ್ರಗತಿಯ ವಿವರಗಳನ್ನು ಒದಗಿಸುವುದು?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಸಾರಿಗೆ ಇಲಾಖೆಗೆ ಮಂಜೂರಾಗಿರುವ ಹಲವಾರು ಹುದ್ದೆಗಳು ಖಾಲಿ ಇದ್ದು, ಇದರಿಂದಾಗಿ ಈಗಾಗಲೇ ಮಂಜೂರಾಗಿರುವ ಬೆಂಗಳೂರಿನ ಬನಶಂಕರಿ, ಚಾಮರಾಜಪೇಟೆ, ಆರ್.ಟಿ.ನಗರ, ಮಾರತ್‌ಹಳ್ಳಿ, ಹುಬ್ಬಳ್ಳಿ, ಸುರತ್ಕಲ್ ಮತ್ತು ತರೀಕೆರೆಗಳ ಪ್ರಾದೇಶಿಕ/ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಗಳನ್ನು ಪ್ರಾರಂಭಿಸಿರುವುದಿಲ್ಲ. ಸದರಿ ಕಛೇರಿಗಳಿಗೆ ಮಂಜೂರಾಗಿರುವ ಹುದ್ದೆಗಳು ನೇಮಕಾತಿ ಮೂಲಕ ಭರ್ತಿಯಾದ

ನಂತರ ಮಂಜೂರಾಗಿರುವ ಹೊಸ ಕಛೇರಿಗಳನ್ನು ಪ್ರಾರಂಭಿಸಲಾಗುವುದು.

ಮಧುಗಿರಿಯಲ್ಲಿ ದಿನಾಂಕ: 30.12.2013 ಮತ್ತು ದಾಂಡೇಲಿಯಲ್ಲಿ ದಿ:28.02.2014 ರಿಂದ ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಗಳನ್ನು ಪ್ರಾರಂಭಿಸಲಾಗಿದೆ.

ಆ) ಮಂಗಳೂರು, ಬೆಳಗಾವಿ ಮತ್ತು ಹೊಸಪೇಟೆಗಳಲ್ಲಿ ಸ್ವಯಂಚಾಲಿತ ಪರೀಕ್ಷಾ ಟ್ರ್ಯಾಕ್‌ಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮುಖಾಂತರ ಅನುಷ್ಠಾನಗೊಳಿಸಲು ಸರ್ಕಾರವು ದಿನಾಂಕ: 29.01.2015 ರಂದು ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತದೆ. ಅದರಂತೆ, ಕಾಮಗಾರಿಗಳ ಅನುಷ್ಠಾನ ಪ್ರಕ್ರಿಯೆ ಜಾರಿಯಲ್ಲಿದೆ.

ಮಂಗಳೂರಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮುಖಾಂತರ ಭಾರಿ ವಾಹನ ಚಾಲಕರ ತರಬೇತಿ ಸಂಸ್ಥೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು ದಿನಾಂಕ:09.06.2015 ರಂದು ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಕಾಮಗಾರಿಯ ಅನುಷ್ಠಾನ ಸಂಬಂಧ ಅವಶ್ಯಕ ಕ್ರಮಕೈಗೊಳ್ಳಲಾಗುತ್ತಿದೆ.

ಇದೇ ರೀತಿ ಕಲಬುರಗಿಯಲ್ಲಿ ಭಾರಿ ವಾಹನ ಚಾಲನ ತರಬೇತಿ ಸಂಸ್ಥೆಯನ್ನು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮುಖಾಂತರ ಅನುಷ್ಠಾನಗೊಳಿಸಲು ಸರ್ಕಾರವು ದಿನಾಂಕ:17.01.2015 ರಂದು ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಕಾಮಗಾರಿಯ ಅನುಷ್ಠಾನ ಕ್ರಮ ಜಾರಿಯಲ್ಲಿದೆ.

ಮೇಲ್ಕಂಡ ಸಂಸ್ಥೆಗಳ ಅನುಷ್ಠಾನ ಕಾರ್ಯ ಪೂರ್ಣಗೊಂಡ ನಂತರ ತರಬೇತಿ ನೀಡುವ ಕಾರ್ಯ ಆರಂಭಿಸಲಾಗುವುದು.

ಇ) ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 776 ರ ಅನುಬಂಧ

ಸ್ವಯಂಚಾಲಿತ (ಗಣಕೀಕೃತ/ಎಲೆಕ್ಟ್ರಾನಿಕ್) ಡ್ರೈವಿಂಗ್ ಟ್ರ್ಯಾಕ್

ಮಂಗಳೂರು, ಬೆಳಗಾವಿ ಮತ್ತು ಹೊಸಪೇಟೆಗಳಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮುಖಾಂತರ ಅನುಷ್ಠಾನಗೊಳಿಸಲು ಸರ್ಕಾರವು ದಿನಾಂಕ:29.01.2015ರ ಆದೇಶದಲ್ಲಿ ಮಂಜೂರಾತಿ ನೀಡಿದೆ. 2015–16 ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2041–00–800–0–02 ಸಾರಿಗೆ ಕಲ್ಯಾಣ ಮತ್ತು ರಸ್ತೆ ಸುರಕ್ಷತೆ ಅಡಿಯಲ್ಲಿ ಒದಗಿಸಲಾದ ರೂ.500.00 ಲಕ್ಷಗಳ ಅನುದಾನವನ್ನು ಸದರಿ ಯೋಜನೆಗಳಿಗೆ ಈ ಕೆಳಕಂಡಂತೆ ಬಳಸಿಕೊಳ್ಳಲು ಉದ್ದೇಶಿಸಿದೆ.

(ರೂ. ಲಕ್ಷಗಳಲ್ಲಿ)

ಕ್ರಸಂ	ವಿವರಗಳು	ಅಂದಾಜು ಮೊತ್ತ	2015–16ನೇ ಸಾಲಿಗೆ ಬಳಸಲು ಉದ್ದೇಶಿಸಿರುವ ಮೊತ್ತ	ಬಿಡುಗಡೆ/ಖರ್ಚು ಮಾಡಿದ ಅನುದಾನ	ಷರಾ
1	ಮಂಗಳೂರಿನಲ್ಲಿ ಸ್ವಯಂಚಾಲಿತ (ಗಣಕೀಕೃತ/ಎಲೆಕ್ಟ್ರಾನಿಕ್) ಡ್ರೈವಿಂಗ್ ಟ್ರ್ಯಾಕ್ ಸ್ಥಾಪನೆ	720 00 (ಪರಿಷ್ಕೃತ 640)	170 00	–	31 03 2015ರ ಅಂತ್ಯದವರೆಗೆ 10 ಎಕರೆ ಜಮೀನಿನ ಬಾಬ್ತು ರೂ 5,01,06,175/–ಗಳನ್ನು ಕೆ ಐ ಎ ಡಿ ಬಿ ಗೆ ಪಾವತಿಸಿದೆ ಯೋಜನೆಯ ಪರಿಷ್ಕೃತ ಅಂದಾಜಿಗೆ ಮಂಜೂರಾತಿ ನೀಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ
2	ಬೆಳಗಾವಿಯಲ್ಲಿ ಸ್ವಯಂಚಾಲಿತ (ಗಣಕೀಕೃತ/ಎಲೆಕ್ಟ್ರಾನಿಕ್) ಡ್ರೈವಿಂಗ್ ಟ್ರ್ಯಾಕ್ ಸ್ಥಾಪನೆ	630 00	170 00	–	31 03 2015ರ ಅಂತ್ಯದವರೆಗೆ 4 ಎಕರೆ ಜಮೀನಿನ ಬಾಬ್ತು ರೂ 3,40,34,618/–ಗಳನ್ನು ಕೆ ಐ ಎ ಡಿ ಬಿ ಗೆ ಪಾವತಿಸಿದೆ ಯೋಜನೆಯ ಸಂಬಂಧ ಕೆ ಎಸ್ ಆರ್ ಟಿ ಸಿ ಯಿಂದ ಪರಿಷ್ಕೃತ ಅಂದಾಜು ಬರಬೇಕಿದೆ
3	ಹೊಸಪೇಟೆಯಲ್ಲಿ ಸ್ವಯಂಚಾಲಿತ (ಗಣಕೀಕೃತ/ಎಲೆಕ್ಟ್ರಾನಿಕ್) ಡ್ರೈವಿಂಗ್ ಟ್ರ್ಯಾಕ್ ಸ್ಥಾಪನೆ	600 00	160 00	–	31 03 2015ರ ಅಂತ್ಯದವರೆಗೆ 4 ಎಕರೆ ಜಮೀನಿನ ಬಾಬ್ತು ಶೇ 20ರ ಮೊತ್ತ ರೂ 15 64 ಲಕ್ಷಗಳನ್ನು ಕೆ ಐ ಎ ಡಿ ಬಿ ಗೆ ಪಾವತಿಸಿದೆ ಉಳಿಕೆ ಮೊತ್ತ ರೂ 2,76,48,240/–ಗಳ ಪಾವತಿಗೆ ಮಂಜೂರಾತಿ ನೀಡಬೇಕಾಗಿದೆ
	ಒಟ್ಟು	1950 00	500 00		

ಭಾರಿ ವಾಹನ ಚಾಲಕರ ತರಬೇತಿ ಸಂಸ್ಥೆ

2015–16ನೇ ಸಾಲಿಗೆ ಲೆಕ್ಕ ಶೀರ್ಷಿಕೆ 5055–00–050–0–04 ಚಾಲನಾ ತರಬೇತಿ ಸಂಸ್ಥೆ–ಪಿಪಿಪಿ 059 ಇತರೆ ಖರ್ಚುಗಳು ಅಡಿಯಲ್ಲಿ ರೂ.800.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, ಸದರಿ ಅನುದಾನವನ್ನು ಮಂಗಳೂರು ಹಾಗೂ ಕಲಬುರಗಿಗಳಲ್ಲಿ ಭಾರಿ ವಾಹನ ಚಾಲಕರ ತರಬೇತಿ ಸಂಸ್ಥೆ ಸ್ಥಾಪನೆ ಸಂಬಂಧ ಈ ಕೆಳಕಂಡಂತೆ ಬಳಸಿಕೊಳ್ಳಲು ಉದ್ದೇಶಿಸಿದೆ.

ಕ್ರ.ಸಂ.	ವಿವರಗಳು	ಅಂದಾಜು ಮೊತ್ತ	2015–16ನೇ ಸಾಲಿಗೆ ಬಳಸಲು ಉದ್ದೇಶಿಸಿರುವ ಮೊತ್ತ	ಬಿಡುಗಡೆ/ಖರ್ಚು ಮಾಡಿದ ಅನುದಾನ	ಷರಾ
1	ಮಂಗಳೂರಿನಲ್ಲಿ ಭಾರಿ ವಾಹನ ಚಾಲಕರ ತರಬೇತಿ ಸಂಸ್ಥೆ ಸ್ಥಾಪನೆ.	1500.00	400.00	–	ಸದರಿ ತರಬೇತಿ ಶಾಲೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮುಖಾಂತರ ಅನುಷ್ಠಾನಗೊಳಿಸಲು ಸರ್ಕಾರವು ದಿ.09.06.2015 ರ ಆದೇಶದಲ್ಲಿ ಮಂಜೂರಾತಿ ನೀಡಿದೆ.
2	ಕಲಬುರಗಿಯಲ್ಲಿ ಭಾರಿ ವಾಹನ ಚಾಲಕರ ತರಬೇತಿ ಸಂಸ್ಥೆ ಸ್ಥಾಪನೆ.	1500.00	400.00	–	ಸದರಿ ತರಬೇತಿ ಶಾಲೆಯನ್ನು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಿಂದ ಅನುಷ್ಠಾನಗೊಳಿಸಲು ಸರ್ಕಾರವು ದಿನಾಂಕ:17.01.2015ರ ಆದೇಶದಲ್ಲಿ ರೂ.15.00 ಕೋಟಿಗಳ ಅಂದಾಜುಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. 2015–16ನೇ ಸಾಲಿಗೆ ರೂ.400.00 ಲಕ್ಷಗಳನ್ನು ಸದರಿ ಸಂಸ್ಥೆಗೆ ಪಾವತಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
	ಒಟ್ಟು	**3000.00**	**800.00**		